**ದಿಃ26.11.2024 ರಂದು ಆರೋಪಿ ದಂಡ ಪ್ರಕ್ರೀಯಾ ಸಂಹಿತೆಯ ಕಲಂ 311 ರಡಿ ಸಲ್ಲಿಸಿದ ಅರ್ಜಿಯ ಮೇಲೆ ಮಾಡಿದ ಆದೇಶದ ಪ್ರಕಾರ ಸಾಕ್ಷಿಯನ್ನು ಈ ದಿನ ದಿನಾಂಕಃ 11.02.2026 ರಂದು ಸಾಕ್ಷಿಯನ್ನು ನ್ಯಾಯಾಲಯಕ್ಕೆ ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್ ಬಿ ಎಸ್ ವಕೀಲರಿಂದಃ**

10. ಮೃತಳ ಹೇಳಿಕೆಯನ್ನು ಪಡೆಯಲು ಆಸ್ಪತ್ರೆಗೆ ತಹಶೀಲ್ದಾರರು ಬಂದಿದ್ದರಾ ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ತಹಶೀಲ್ದಾರರರು ಆಸ್ಪತ್ರೆಗೆ ಬಂದಾಗ ಅವರ ಜೊತೆಗೆ 3–4 ಜನರು ಇದ್ದು ಅವರುಗಳು ಯಾರು ಎಂದು ನನಗೆ ಗೊತ್ತಿಲ್ಲ. ತಹಶೀಲ್ದಾರರು ಆಸ್ಪತ್ರೆಗೆ ಬಂದಾಗ ಆಸ್ಪತ್ರೆಯ ವೈದ್ಯಾಧಿಕಾರಿಗಳು ಇದ್ದರು. ಮೃತೆಯ ಹೇಳಿಕೆಯನ್ನು ತಹಶೀಲ್ದಾರರು ಪಡೆಯುವ ಸಮಯದಲ್ಲಿ ನಾನು ಮೃತೆಯ ಹೇಳಿಕೆಯನ್ನು ಪಡೆದ ವಾರ್ಡಿನ ಬಾಗಿಲ ಬಳಿ ನಿಂತಿದ್ದೆ. ಮೃತೆ ತಹಶೀಲ್ದಾರರ ಬಳಿ ಏನು ಹೇಳಿಕೆಯನ್ನು ನೀಡಿದಳು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ತಹಶೀಲ್ದಾರರು ಹೊರಗೆ ಬಂದು ನಿಪಿ 2 ಕ್ಕೆ ಸಹಿ ಮಾಡಬೇಕು ಎಂದು ಹೇಳಿದ ಮೇರೆಗೆ ನಾನು ನಿಪಿ 2 ಕ್ಕೆ ಸಹಿ ಮಾಡಿರುತ್ತೇನೆ. ನಿಪಿ 2 ರಲ್ಲಿ ಏನು ಬರೆದಿದೆ ಎಂಬ ಬಗ್ಗೆ ನಿಮಗೆ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಗಡಿಬಿಡಿಯಲ್ಲಿ ನನಗೆ ನಿಪಿ 2 ನ್ನು ಓದಲು ಆಗಲಿಲ್ಲ ಎನ್ನುತ್ತಾರೆ. ನನ್ನನ್ನು ಹೊರತುಪಡಿಸಿ ನಿಪಿ 2 ಕ್ಕೆ ಬೇರೆ ಯಾರು ಸಹಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಘಟನೆಯ ಸತ್ಯತೆಯನ್ನು ತಿಳಿದುಕೊಳ್ಳಲು ನೀವು ಪ್ರಯತ್ನಿಸಿದಿರಾ ಎಂದರೆ ಸಾಕ್ಷಿ ಹೌದು ಪ್ರಯತ್ನಿಸಿದ್ದೇನೆ , ಘಟನೆಯ ಬಗ್ಗೆ ಮೃತೆಯ ತಾಯಿಯ ಬಳಿ ನಾನು ಕೇಳಿದ್ದೆ , ಆಗ ಮೃತೆಯ ತಾಯಿ ತಾನು ಹುಬ್ಬಳ್ಳಿಯಲ್ಲಿದ್ದು ಮೃತೆ ಹೊನ್ನಾವರದಲ್ಲಿದ್ದು ಅಲ್ಲಿ ಏನಾಗಿತ್ತು ಎಂದು

ತನಗೆ ಗೊತ್ತಿಲ್ಲ ಎಂದು ತನ್ನ ಬಳಿ ಹೇಳಿದ್ದರು ಎಂದು ಸಾಕ್ಷಿ ನುಡಿಯುತ್ತಾರೆ. ಆಸ್ಪತ್ರೆಗೆ ನೀವು ಹೋಗಿದ್ದಾಗ ಫ್ರಾಸಾ 3 ಮತ್ತು 5 ರವರನ್ನು ಭೇಟಿಯಾಗಿದ್ದರಾ ಎಂದರೆ ಸಾಕ್ಷಿ ನನಗೆ ಫ್ರಾಸಾ 3 ಮತ್ತು 5 ರವರ ಪರಿಚಯ ಇಲ್ಲ ಎನ್ನುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

Sd/-

(ಪರಮೇಶ್ವರ ಪ್ರಸನ್ನ ಬಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ